







ಕಾಗೆ ಬಿಡಬೇಕಲ್ಲ. ತಾನೂ ಆಹಾರ ಕದಿಯಲು ಹಾರಲಾರಂಭಿಸಿತು. ನನಗೆ ಡಾರ್ವಿನ್ನರ ಸಿದ್ಧಾಂತದ  ನೆನಪಾಯಿತು. ಬದುಕಿಗಾಗಿ ಪ್ರತಿಯೊಬ್ಬರೂ ಹೋರಾಡುವವರೇ ಅಲ್ಲವೇ?

ಕೊನೆಗೆ ಎಲ್ಲರ ಕಣ್ಣನ್ನೂ ತಪ್ಪಿಸಿ ಕಪ್ಪೆಯನ್ನು ಮೊದಲು ಹಿಡಿದಿದ್ದ ಗೋಹಕ್ಕಿಯೇ ಗುಳುಂ ಮಾಡಿತು. ಜೀವಿಗಳಲ್ಲಿ ನಡೆಯುವ ಆಹಾರದ ಹುಡುಕಾಟ, ಹೋರಾಟ ವಿಸ್ಮಯಕಾರಿ ಎನಿಸಿತು.

ಎಲ್ಲೆಲ್ಲೂ ಬಿಳಿಯ ಬೆಳ್ಳಕ್ಕಿಗಳನ್ನು ಕೆರೆ, ಹೊಂಡ, ಹಳ್ಳ–ಕೊಳ್ಳಗಳಲ್ಲಿ ಕಾಣುತ್ತೇವೆ. ಇವು ಆರ್ಡಿಡೇ ಕುಟುಂಬಕ್ಕೆ ಸೇರಿವೆ. ಈ ಬೆಳ್ಳಕ್ಕಿಗಳಲ್ಲಿ ಮೂರು ಪ್ರಭೇದಗಳಿವೆ.

ಗೋಹಕ್ಕಿ:  ಇದನ್ನು ವೈಜ್ಞಾನಿಕವಾಗಿ ಬುಬುಲ್ಕಸ್ ಐಬಿಸ್ ಎಂದು ಕರೆಯುತ್ತಾರೆ. ಹಳದಿ ಕೊಕ್ಕು, ಕಪ್ಪು ಕಾಲು, ಪಾದಗಳಿವೆ. ಇವುಗಳ ಆಯುಷ್ಯ 6–7 ವರ್ಷ. ಹೆಣ್ಣು– ಗಂಡನ್ನು ಗುರುತಿಸುವುದು ಕಷ್ಟ. ಆದರೆ ಸಂತಾನೋತ್ಪತ್ತಿಯ ಕಾಲದಲ್ಲಿ ಗಂಡು ಗೋಹಕ್ಕಿಯ ತಲೆ, ಬೆನ್ನಿನ ಭಾಗವು ಕಿತ್ತಳೆ ಬಣ್ಣಕ್ಕೆ ತಿರುಗುತ್ತದೆ.

ಮಧ್ಯಕ್ಕಿ: ವೈಜ್ಞಾನಿಕವಾಗಿ ಮಿಸೋಫೋಲಿಕ್ಸ್ ಇಂಟರ್ ಮಿಡಿಯ ಎಂಬ ಹೆಸರಿದೆ. ಕೊಕ್ಕು, ಕಾಲು, ಪಾದಗಳು ಕಪ್ಪಾಗಿವೆ. ಹೆಣ್ಣು– ಗಂಡನ್ನು ಗುರುತಿಸುವುದು ಕಷ್ಟ. ಆದರೆ ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಹಕ್ಕಿಯ ತಲೆಯ ಮೇಲೆ ಹಿಂದಕ್ಕೆ ಬಾಗಿದ ಜುಟ್ಟು ಇರುತ್ತದೆ.

ಸಣ್ಣಕ್ಕಿ: ವೈಜ್ಞಾನಿಕವಾಗಿ ಇದನ್ನು ಇಗ್ರೆಟ್ಟಾ ಗಾರ್ಜೆಟ್ಟಾ ಎನ್ನುವರು. ಸಾಮಾನ್ಯವಾಗಿ ಲಿಟಲ್ ಇಗ್ರೆಟ್ ಎಂಬ ಹೆಸರಿದೆ. ಮಧ್ಯಕ್ಕಿಯಂತೆ ಸಂತಾನೋತ್ಪತ್ತಿ ಕಾಲದಲ್ಲಿ ಗಂಡು ಹಕ್ಕಿಯ ತಲೆಯ ಮೇಲಿನ ಹಿಂದಕ್ಕೆ ಬಾಗಿದ ಜುಟ್ಟಿನಿಂದ ಗುರುತಿಸಬಹುದು.

ಈ ಬೆಳ್ಳಕ್ಕಿಗಳು  ಕೆರೆ, ಹೊಂಡ, ಹಳ್ಳ –ಕೊಳ್ಳಗಳಲ್ಲಿ ಸಾಮಾಜಿಕ ಬದುಕು ನಡೆಸುತ್ತವೆ. ಜುಲೈ –ಸೆಪ್ಟಂಬರ್ ತಿಂಗಳು ಸಂತಾನೋತ್ಪತ್ತಿ ಅವಧಿಯಾಗಿದೆ. ಗುಂಪಿನಲ್ಲಿ ಗೂಡು ಕಟ್ಟುತ್ತವೆ. ಹೆಣ್ಣು 3–4 ಮೊಟ್ಟೆಗಳನ್ನು ಇಡುತ್ತದೆ. ಗೋಹಕ್ಕಿ ನೀಲಿ ಬಣ್ಣದ ಮೊಟ್ಟೆಗಳನ್ನು ಇಡುವುದು ವಿಶೇಷ.